# ಸಮಗ್ರ ಶಿಕ್ಷಣ-ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01


ಸಂಖ್ಯೆ : ಎಸ್.ಎಸ್.ಕೆ/ಗು.ಖಾ/ನಲಿ-ಕಲಿ/ಯುನಿಸೆಫ್.ಇ.ನಲಿ-ಕಲಿ/2019-20 ದಿನಾಂಕ: 16-07-2020

ರಾಜ್ಯದ ಎಲ್ಲಾ

34 ಡಯಟ್‌ಗಳ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ,

ವಿಷಯ: ***English Nali-Kali Class-01 Teacher's Training.***

*******

‘ಇಂಗ್ಲೀಷ್ ನಲಿ-ಕಲಿ ತರಗತಿ-01’ರ ಕಾರ್ಯಕ್ರಮವು 2020-21ನೇ ಶೈಕ್ಷಣಿಕ ಸಾಲಿಗೆ ರಾಜ್ಯಾದ್ಯಂತ ಅನುಷ್ಠಾನಗೊಳ್ಳುತ್ತಿರುವ ವಿನೂತನ ಕಾರ್ಯಕ್ರಮವಾಗಿರುತ್ತದೆ. ಕರ್ನಾಟಕ ಪಠ್ಯಪುಸ್ತಕ ಸಂಘದ ವತಿಯಿಂದ ತಾಲ್ಲೂಕು ಹಂತಕ್ಕೆ ನಲಿ-ಕಲಿ ಕಲಿಕಾ ಸಾಮಗ್ರಿಗಳು ಸರಬರಾಜುಗೊಳ್ಳುವಂತೆ ಈಗಾಗಲೇ ಸಮಗ್ರ ಶಿಕ್ಷಣ-ಕರ್ನಾಟಕದ ವತಿಯಿಂದ ಕ್ರಮವಹಿಸಲಾಗಿರುತ್ತದೆ.

ಮಾನ್ಯ ಆಯುಕ್ತರ ಆದೇಶದಂತೆ, ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ ‘ಕನ್ನಡ ಮತ್ತು ಉರ್ದು ಮಾಧ್ಯಮ’ದ ನಲಿ-ಕಲಿ ಘಟಕಗಳ ಎಲ್ಲಾ ಶಿಕ್ಷಕರಿಗೂ DSERTಯ ಮೇಲುಸ್ತುವಾರಿಯಲ್ಲಿ **‘English Nali-Kali Class-01’** ರ ತರಬೇತಿಯನ್ನು ಜಿಲ್ಲೆ/ಬ್ಲಾಕ್ ಹಂತದಲ್ಲಿ ತುರ್ತು ಆಯೋಜಿಸಬೇಕಿದೆ. ಈ ಹಿನ್ನೆಲೆಯಲ್ಲಿ ಪ್ರತೀ ಡಯಟ್ ಹಂತದಲ್ಲಿಯೂ 2020-21ನೇ ಶೈಕ್ಷಣಿಕ ಸಾಲಿಗೆ ಪೂರಕವಾಗಿ ಒಬ್ಬ ಸಮರ್ಥ ಅಧಿಕಾರಿಯನ್ನು ನಲಿ-ಕಲಿ ಕಾರ್ಯಕ್ರಮದ ನೋಡಲ್ ಅಧಿಕಾರಿಯನ್ನಾಗಿ ತಕ್ಷಣವೇ ನಿಯೋಜಿಸಿಕೊಳ್ಳತಕ್ಕದ್ದು. ಈಗಾಗಲೇ ಪ್ರತೀ ಡಯಟ್ ಹಂತದಿಂದಲೂ 2019-20ರಲ್ಲಿ ಇದೇ ಕಾರ್ಯಕ್ರಮಕ್ಕಾಗಿ ಗುರುತಿಸಲಾಗಿರುವ 03 ಮಂದಿ **ENK-MRP** ಗಳೊಂದಿಗೆ ಡಯಟ್‌ನ ನೋಡಲ್ ಅಧಿಕಾರಿಗಳು ತಕ್ಷಣವೇ ಸಂಪರ್ಕ ಸಾಧಿಸತಕ್ಕದ್ದು. ನಿಮ್ಮ ಜಿಲ್ಲೆಯ MRPಗಳ ವಿವರವನ್ನು ಇದೇ ಪತ್ರದೊಂದಿಗೆ ಅನುಬಂಧಿಸಿದೆ.

ಹೀಗೆ ಆಯ್ಕೆ ಮಾಡಲಾದ ಡಯಟ್‌ನ ಒಬ್ಬ ನಲಿ-ಕಲಿ ನೋಡಲ್ ಅಧಿಕಾರಿ ಹಾಗೂ 03 ಮಂದಿ MRP ಗಳಿಗೆ 02 ಗಂಟೆ ಅವಧಿಗಳ 02 ದಿನದ ಪುನಃಶ್ಚೇತನ/ಪರಿಚಯಾತ್ಮಕ ತರಬೇತಿಯನ್ನು ಆನ್‌ಲೈನ್ ಪ್ರಕ್ರಿಯೆ ಮೂಲಕ ನೀಡಲಾಗುವುದು. **ದಿನಾಂಕ: 22-07-2020 ಮತ್ತು 23-07-2020** ರಂದು ಯುನಿಸೆಫ್ ಸಂಪನ್ಮೂಲ ತಂಡದ ತಾಂತ್ರಿಕ ಮುಖ್ಯಸ್ಥರ ನೇತೃತ್ವದಲ್ಲಿ ನಡೆಸಲಾಗುವ ಆನ್‌ಲೈನ್ ಭೇಟಿಯಲ್ಲಿ ಈ ಎಲ್ಲಾ ಸದಸ್ಯರು ಕಡ್ಡಾಯವಾಗಿ ಭಾಗವಹಿಸತಕ್ಕದ್ದು. ಆನ್‌ಲೈನ್ ಲಿಂಕ್ ವಿಳಾಸವನ್ನು ಕೂಡಲೇ ತಿಳಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಮಂಜುಳ ಆರ್

ಹಿರಿಯ ಕಾರ್ಯಕ್ರಮಾಧಿಕಾರಿ

ಗುಣಮಟ್ಟ ಖಾತರಿ

ಸಮಗ್ರ ಶಿಕ್ಷಣ-ಕರ್ನಾಟಕ

ಬೆಂಗಳೂರು-01.